ಶ್ರೀ ಎಸ್. ಆರ್. ಬೊಮ್ಮಾಯಿ.—ಗೋಮಾಳ ಭೂಮಿಯಾಗಿರುವುದರಿಂದ ಅವಶ್ಯಕತೆ ಇದ್ದರೂ ಸಹ ಬೇರೆಯವರಿಗೆ ಕೊಡುವುದಕ್ಕೆ ಬರುವುದಿಲ್ಲ. ಜಿಲ್ಲಾಧಿಕಾರಿಗಳು ಸ್ವತಃ ಹೋಗಿದ್ದಾರೆ. ಲೋಕಲ್ ಇನ್ಸ್‌ಪೆಕ್ಷನ್ ಮಾಡಿದ್ದಾರೆ, ಅಲ್ಲಿ ನಷ್ಟವಾಗಿದೆ ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಕಾನೂನು ಪ್ರಕಾರ ಕೊಡಲಿಕ್ಕೆ ಸಾಧ್ಯವಾದರೆ ಪರಿಶೀಲನೆ ಮಾಡಿ ಸಹಾಯ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಪರಿಹಾರವನ್ನು ಕೊಡಲಿಕ್ಕೆ ಬರುತ್ತದೆ ಸ್ವಾಮಿ ನಿಮಗೆ ಗೊತ್ತಿರುವ ಹಾಗೆ ಸರ್ಕಾರಿ ಭೂಮಿಯಲ್ಲಿ ಜೋಪಡಿ ಇದ್ದು ಅದು ಸುಟ್ಟುಹೋದರೆ ಪರಿಹಾರವನ್ನು ಕೊಡುತ್ತೀರಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಹ್ಯುಮಾನಿಟೇರಿಯನ್ ಗ್ರೌಂಡ್ಸ್ ಮೇಲೆ ಪರಿಹಾರ ಕೊಡಲಿಕ್ಕೆ ಸಾಧ್ಯವಾದರೆ ಅದನ್ನು ಕನ್ಸಿಡರ್ ಮಾಡುತ್ತೇನೆ. ಆಲ್ಲಿರತಕ್ಕ ಸಮಸ್ಯೆ ಬಗ್ಗೆ ಆ ಭಾಗದ ಶಾಸಕರು, ಜಿಲ್ಲಾ ಮಂತ್ರಿಗಳು, ಆ ಊರಿನ ಹಳ್ಳಿಯ ಜನರನ್ನು ಕರೆಸಿ ಸಮಸ್ಯೆಯನ್ನು ಇತ್ಯರ್ಥ ಮಾಡಬೇಕು. ಇದು ಗಟ್ಟಿತನೇ ಇಸವಿಯಿಂದ ನಡೆಯುತ್ತಿದೆ. ಗೋಮಾಳಕ್ಕೆ ಎಷ್ಟು ಭೂಮಿಯನ್ನು ಬಿಡಬೇಕು, ಭೂಮಿಯನ್ನು ಪಡೆದುಕೊಂಡಿರುವವರಲ್ಲಿ ಸರ್ಕಾರಿ ನೌಕರರ ಸಂಬಂಧೀಕರಿರುವರೇ ಎಂಬುದನ್ನು ನೋಡುತ್ತೇನೆ. ಆ ಸಭೆಗೆ ಮಾನ್ಯ ಪಂಪಾಪತಿಯವರನ್ನು ಕರೆಯುತ್ತೇನೆ, ಅದನ್ನು ಇತ್ಯರ್ಥ ಮಾಡತಕ್ಕ ಆಲೋಚನೆ ಮಾಡುತ್ತಿದ್ದೇನೆ ಅದನ್ನು ಮಾಡುತ್ತೇನೆ.

ಶ್ರೀ ಪಂಪಾಪತಿ.—ಭೂಮಿಯನ್ನು ಕೊಡಲಿಕ್ಕೆ ಏನೂ ತೊಂದರೆಯಿಲ್ಲ. ಅಲ್ಲಿ ಬೆಟ್ಟಗುಡ್ಡ ಭೂಮಿ ಇದೆ. ಇದರಿಂದ ತೊಂದರೆಯಾಗುತ್ತದೆ. ಜನ ಊರುಬಿಟ್ಟು ಹೋಗಲೇಬೇಕಾಗುತ್ತದೆ. ಹಿಂದಿನ ಸರ್ಕಾರಗಳು ಕೊಟ್ಟಿದ್ದು ಹತ್ತು ಐದಾರು ವರ್ಷ ಸುಮ್ಮನಿದ್ದು ಈಗ ಬಂದು ಅವರನ್ನು ಹೊರತಳ್ಳುತ್ತಿರುವುದು...

ಅಧ್ಯಕ್ಷರು.—ಶ್ರೀ ಪಂಪಾಪತಿಯವರೇ ಯಾಕೆ ಹೀಗೆ ಮಾಡ್ತೀರಿ ? ಅವರು ಸರಿಯಾದ ಉತ್ತರವನ್ನು ಹೇಳಿದ್ದಾರೆ.

ಶ್ರೀ ಪಂಪಾಪತಿ.—ಅಲ್ಲಿಂದ ಓಡಿಸುತ್ತಾರೆ. ಆ ಜನ ಎಲ್ಲಿಗೆ ಹೋಗಬೇಕು ?

ಶ್ರೀ ಎಸ್. ಆರ್. ಬೊಮ್ಮಾಯಿ.—ನೋಡಿ. ಲೀಗಲ್ ಆಗಿ ನೋಟೀಸ್ ಕೊಟ್ಟು ಎವಿಕ್ಷನ್ ಆಗಬೇಕಾಗುತ್ತದೆ. ಆ ರೀತಿ ಓಡಿಸುವುದಕ್ಕೆ ಆಗುವುದಿಲ್ಲ. ಕಾನೂನು ಪ್ರಕಾರ ಹೋಗಬೇಕಾಗುತ್ತದೆ.

ನಿಯಮ ೩೩೪ರ ಮೇರೆಗೆ

೧) ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರಗಳಲ್ಲಿ ಗೋ ಆಸ್ಪತ್ರೆ ಹಾಗೂ ಆರೋಗ್ಯ ಘಟಕಗಳ ರಿಪೇರಿ ಕೆಲಸಗಳನ್ನು ಮಾಡಲು ಒತ್ತಾಯ.

ಶ್ರೀ ವಸಂತ ವಿ. ಸಾಲಿಯಾನ (ಕಾಪು).—ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿಯ ಗೋ ಆಸ್ಪತ್ರೆ ಮತ್ತು ಆರೋಗ್ಯ ಘಟಕಗಳ ರಿಪೇರಿಗಳ ಬಗ್ಗೆ ಸರಕಾರ ಈ ತನಕ ಪಿಡಬ್ಲ್ಯೂಡಿ ಇಲಾಖೆಗೆ ಅಥವಾ ಜಿಲ್ಲಾ ಪರಿಷತ್‌ಗಾಗಲೀ ಆದೇಶ ಕೊಡಲಿಲ್ಲ. ಇದರಿಂದಾಗಿ ಗ್ರಾಮಾಂತರ ಪ್ರದೇಶದಲ್ಲಿಯ ಈ ಆಸ್ಪತ್ರೆಗಳು ಬಹಳ ನಾದುರಸ್ತಿಯಲ್ಲಿದೆ. ಈ ಬಗ್ಗೆ ಸರಕಾರವು ಕೂಡಲೇ ಪರಿಶೀಲಿಸಿ ಈ ಆಸ್ಪತ್ರೆಯ ದುರಸ್ತಿಗಳ ಬಗ್ಗೆ ಸೂಕ್ತ ಆದೇಶವನ್ನು ಕೊಟ್ಟು ದಕ್ಷಿಣ ಕನ್ನಡ ಜಿಲ್ಲೆಯ ಗೋ ಆಸ್ಪತ್ರೆ ಮತ್ತು ಆರೋಗ್ಯ ಘಟಕಗಳ ದುರಸ್ತಿ ಕೆಲಸಗಳನ್ನು ಕೂಡಲೇ ಮಾಡಿಸ ಬೇಕಾಗಿ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಹೆಲ್ತ್ ಮಿನಿಸ್ಟ್ರು ಆ ಮನೇಲಿದ್ದಾರೆ, ಉತ್ತರ ತರಿಸಿಕೊಡುತ್ತೇನೆ ಸ್ವಾಮಿ.

SRI VASANTHA V. SALIANA.—I am not getting any reply to my matters raised under 334.

SRI A. LAKSHMISAGAR.—You will get answer tomorrow. The Hon. Health Minister is the leader of the Legislative Council He is held up there.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಒಂದು ಕೆಲಸ ಮಾಡಬಹುದು, ಮಿನಿಸ್ಟ್ರು ಆ ಮನೇಲಿದ್ದರೆ ಇಲ್ಲಿ ಬೇರೆ ಯಾರಾದರೂ ಉತ್ತರ ಹೇಳಬಹುದಲ್ಲ. ನಿನ್ನೆಯೂ ಇದೇ ರೀತಿ ಆಯ್ತು.

ಶ್ರೀ ಎ. ಲಕ್ಷ್ಮೀಸಾಗರ್.—ಉತ್ತರವೇ ಇನ್ನೂ ಸಿದ್ಧವಾಗಿಲ್ಲ. ನಾಳೆ ಕೊಡುತ್ತೇನೆ ಎಂದು ಅದಕ್ಕೇ ಹೇಳಿದ್ದು.

೨) ಔರಾದ್ ತಾಲ್ಲೂಕಿನ ಶಂಬಳ್ಳಿ ಸಹಕಾರಿ ಸಂಘ ನಿಯಮಿತದವರು ರೈತರಿಗೆ ಸಾಲವನ್ನು ಮಂಜೂರು ಮಾಡಲು ಒತ್ತಾಯ,

SRI MOHAMMED LAIQUIDDIN.—Vividoddhesha Sahakari Sangha (V.S.S.) Niyamita, shembelly in Aurad Taluk of Bidar District consists of the following villages: (1) Shembelly, (2) Chutnal (3) Mustapur (4) Beloor (5) Aloor. Every year the farmers get the loan frnm the society and they repay the same. As usual this year also the farmers of the above villages numbering about 400 have cleared their previous year loans. As per rule, the Secretary of the Society has submitted the statements for sanctioning of loans as per the requirement of each member, of the above society. But no loan is released to any one of the members. The matter was represented to Deputy Registrar of Co. op Societies, Bidar District, who in turn asked the Managing Director District Co. operative Central Bank. Bidar for release of the loan to the farmers. But the DCC Bank authorities are not sanctioning the loans. The sowing season has already started. For want of loan the farmers of the above villages are facing great hardships. If the loan is not released within a period of 10 days the farmers will be deprived of the Khariff crops. I urge upon the Government to issue loans to all the farmers of the Shembelly VSSN within 10 days.

ಶ್ರೀ ಹೆಚ್. ವಿಶ್ವಾನಾಥ್ಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ತಿಳಿಸಿರುವಂತೆ ಯಾರು ಈಗಾಗಲೇ ಸಾಲವನ್ನು ಮರುಪಾವತಿ ಮಾಡಿದ್ದಾರೆ ಅಂತಹವರ ಬಗ್ಗೆ ಸರಕಾರದವರು ವ್ಯವಸಾಯ ಸೇವಾ ಸಹಕಾರ ಸಂಘದ ಮುಖಾಂತರ ಜಿಲ್ಲಾ ಕೇಂದ್ರ ಬ್ಯಾಂಕ್ ಸಾಲವನ್ನು ವಿತರಣೆ ಮಾಡುವಂತಹ ವ್ಯವಸ್ಥೆ ಮಾಡಲು ನಾನು ಅವರಿಗೆ ಸೂಚನೆ ನೀಡುತ್ತೇನೆ.

ಶ್ರೀ ಆರ್.ಎನ್. ನಾಯಕ್.—ಅಧ್ಯಕ್ಷರೆ. ನನ್ನ ಹತ್ತಿರ ಕಾಪಿ ಇಲ್ಲ.

ಅಧ್ಯಕ್ಷರು.—ಮಾನ್ಯ ಇಬ್ಬರವರದ್ದು ಆದ ಮೇಲೆ ತಾವು ಓದಿ. ಅವಕಾಶ ಕೊಡುತ್ತೇನೆ.